ಈ ದಿನ ದಿನಾಂಕಃ 14.10.2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದಃ</u>**

ನಿಪಿ 9 ಮತ್ತು 10 ರಲ್ಲಿರುವ ದಾಖಲೆಗಳು ಯಾವುವೆಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಿಪಿ 9 ಮತ್ತು 10 ರಲ್ಲಿರುವ ಪಹಣಿ ದಾಖಲೆ ನಾನೇ ನೀಡಿರುತ್ತೇನೆಂದು ನುಡಿಯುತ್ತಾರೆ. ನಿಪಿ 9 ಮತ್ತು 10 ರಲ್ಲಿ ಸರ್ವೆ ನಂ. 94 ಎಂದು ನಮೂದಾಗಿರುತ್ತದೆ ಆದರೆ ಪೋಡು ನನಗೆ ಗೊತ್ತಿಲ್ಲ. ನಿಪಿ 10 ರಲ್ಲಿ ಕಾಲಂ 9 ರಲ್ಲಿ ಪ್ರತಿವಾದಿ ಹೆಸರಿಗೆ 4 ಎಕರೆ 30 ಗುಂಟೆ ಜಮೀನು ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ 10 ರ ಕಾಲಂ 12 ರಲ್ಲಿ ಪ್ರತಿವಾದಿ ಹೆಸರು ಹಾಗೂ 4 ಎಕರೆ 30 ಗುಂಟೆ ಜಮೀನು ನಮೂದಾಗಿರುತ್ತದೆ ಎಂದರೆ ಸರಿ.

2. ನಿಪಿ 9 ನ್ನು 1974 ನೇ ಸಾಲಿನಲ್ಲಿ ದಾವಾ ಸ್ವತ್ತು ಬಸವರಾಜಪ್ಪನವರ ಹೆಸರಿನಲ್ಲಿತ್ತು ಎಂದು ತೋರಿಸಲು ಸದರಿ ದಾಖಲೆ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸರ್ವೆ ನಂ. 94 ರ 4 ಎಕರೆ 30 ಗುಂಟೆ ಜಮೀನಿನ ವಿಸ್ತೀರ್ಣಕ್ಕೆ ಸಂಬಂದಿಸಿದಂತೆ 1979-80 ರಿಂದ 1994 ರ ಅವಧಿಯೊಳಗಿನ ಪಹಣಿಯನ್ನು ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. 1979-80 ನೇ ಸಾಲಿನಿಂದ 1994 ನೇ ಸಾಲಿನವರೆಗೆ ಪಹಣಿ ದಾಖಲೆ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ಸಮಸ್ಯೆ ಇರಲಿಲ್ಲ ಎಂದರೆ ಸರಿ. ಸದರಿ ದಾಖಲೆಗಳನ್ನು ಹಾಜರುಪಡಿಸಿದರೇ ವಸ್ತು ಸ್ಥಿತಿ ಬಯಲಾಗುತ್ತದೆ ಎಂದು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

3. ಪ್ರತಿವಾದಿಗಳು ಸಲ್ಲಿಸಿರುವ ತಕರಾರಿನ ಸಂಗತಿಯನ್ನು ನಾನು ವಕೀಲರಿಂದ ಕೇಳಿ ತಿಳಿದುಕೊಂಡಿರುತ್ತೇನೆ. ಪ್ರತಿವಾದಿಗಳು ತಕರಾರಿನಲ್ಲಿ ನಮೂದಿಸಿರುವ ದಾಖಲೆಗಳನ್ನು ನಾನು ಪರೀಶಿಲಿಸಿರುವುದಿಲ್ಲ. ಸದರಿ ದಾಖಲೆಗಳನ್ನು ಪರಿಶೀಲಿಸಿದರೇ ನಿಜ ಸಂಗತಿಯ ಬಯಲಾಗುತ್ತದೆ ಎಂದು ಪ್ರಸ್ತುತ ನಿಪಿ 9 ಮತ್ತು 10 ರೊಂದಿಗೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ

ಮೊದಲು ನೀಡಿದ ಹೇಳಿಕೆಯಲ್ಲಿನ ಲೋಪವನ್ನು ತೆಗೆದು ಹಾಕಲು ನಿಪಿ 9 ಮತ್ತು 10 ಹಾಜರುಎಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 9 ಮತ್ತು 10 ಹಾಗೂ ದಾವೆಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

4. 1974-75 ರಲ್ಲಿದ್ದ ಸರ್ವೆ ನಂ. 94ರ ಪೋಡು ದಾವಾ ಹಾಕುವ ಕಾಲಕ್ಕೆ ಬದಲಾವಣೆ ಆದ ಪೋಡಿನ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ತಪ್ಪು. 1974-75ನೇ ಸಾಲಿನಲ್ಲಿ ದಾವಾ ಆಸ್ತಿ ರೇಣುಕಪ್ಪನವರ ಹೆಸರಿನಲ್ಲಿರುವುದಿಲ್ಲ ಬಸವರಾಜಪ್ಪನವರ ಹೆಸರಿನಲ್ಲಿದೆ ಎಂದು ನಿಪಿ 9 ಮತ್ತು 10 ನ್ನು ಹಾಜರುಪಡಿಸಿರುತ್ತೇವೆ. ನಿಪಿ 1 ರಂತೆ ಸರ್ವೆ ನಂ. 94/1 ರ ಆಸ್ತಿಯನ್ನು ಬಸವರಾಜಪ್ಪ ಬಿನ್ ರೇವಣಸಿದ್ದಪ್ಪನವರು ಶ್ರಿಮತಿ ಪಾರ್ವತಮ್ಮ ಕೋಂ ಬೀಮನೇರಿ ಮಹಾದೇವಪ್ಪನವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.